ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 14 ಸಿಡಿಸಿ IIIC 2017-18 /1583

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ: 07-06-2017

## -:ಸಭಾ ಸೂಚನಾ ಪತ್ರ:-

ವಿಷಯ: ಎಐಸಿಟಿಇ ಅಭಿವೃದ್ಧಿ ಪಡಿಸಿರುವ **"National Student Startup Policy"** ನ್ನು ಕರ್ನಾಟಕ ರಾಜ್ಯದಲ್ಲಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳುವ ಬಗ್ಗೆ.

ಉಲ್ಲೇಖ: ಈ ಕಚೇರಿ ಪತ್ರ ಸಮ ಸಂಖ್ಯೆ ದಿನಾಂಕ:16-05-2017.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ಉಲ್ಲೇಖಿತ ಪತ್ರದನ್ವಯ ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವಂತಹ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಎಐಸಿಟಿಇ ಅಭಿವೃದ್ಧಿ ಪಡಿಸಿರುವ **"National Student Startup Policy"** ನ್ನು ಅನುಷ್ಠಾನಗೊಳಿಸುವ ಸಲುವಾಗಿ, ತಜ್ಞರ ಸಮಿತಿಯ ಸಭೆಯನ್ನು ಜಂಟಿ ನಿರ್ದೇಶಕರು(ಸಿಡಿಸಿ) ಇವರ ಅಧ್ಯಕ್ಷತೆಯಲ್ಲಿ ದಿನಾಂಕ:25-05-2017ರಂದು ನಡೆಸಲಾಯಿತು. ಸದರಿ ಸಭೆಯಲ್ಲಿ, ಎಐಸಿಟಿಇ ಅಭಿವೃದ್ಧಿ ಪಡಿಸಿರುವ **"National Student Startup Policy"** ನ್ನು ಕರ್ನಾಟಕ ರಾಜ್ಯದಲ್ಲಿ ಅನುಷ್ಠಾನಗೊಳಿಸುವ ಸಂಬಂಧ ಚರ್ಚಿಸಲಾದ ವಿಷಯಗಳ ಕುರಿತು ಸಮಗ್ರ ಯೋಜನಾ ವರದಿಯನ್ನು ತಯಾರಿಸಲು ತಜ್ಞರ ಸಮಿತಿಯ ಸದಸ್ಯರುಗಳಿಗೆ ತಿಳಿಸಿದ್ದು, ಸಂಬಂಧಿಸಿದಂತೆ ಮುಂದಿನ ಕ್ರಮ ಜರುಗಿಸಲು ಸಮಿತಿಯ ಎಲ್ಲಾ ಅಧಿಕಾರಿಗಳು ದಿನಾಂಕ:19-06-2017ರಂದು ಬೆಳಿಗ್ಗೆ 11.00ಗಂಟೆಗೆ ಜಂಟಿ ನಿರ್ದೇಶಕರು(ಸಿಡಿಸಿ) ಇವರ ಕೊಠಡಿಯಲ್ಲಿ ಸಭೆಯನ್ನು ಕರೆಯಲಾಗಿದ್ದು, ಸಭೆಗೆ ಸಮಗ್ರ ಯೋಜನಾ ವರದಿಯೊಂದಿಗೆ ಹಾಜರಾಗಲು ಸೂಚಿಸಲಾಗಿದೆ.

| ಕ್ರ.ಸಂ. | ಹೆಸರು: ಶ್ರೀ/ಶ್ರೀಮತಿ | ಹುದ್ದೆ & ವಿಳಾಸ | ಪದನಾಮ |
|---|---|---|---|
| 1 | ಎ ಎಂ ಭೋಜೇದಾರ್ | ಜಂಟಿ ನಿರ್ದೇಶಕರು(ಸಿಡಿಸಿ), ತಾಂ.ಶಿ.ಇ. ಬೆಂಗಳೂರು | ಅಧ್ಯಕ್ಷರು |
| 2 | ಶೇಖರ್ | ಉಪ ನಿರ್ದೇಶಕರು(ಐಐಐಸಿ), ತಾಂ.ಶಿ.ಇ. ಬೆಂಗಳೂರು | ಸದಸ್ಯ ಕಾರ್ಯದರ್ಶಿ |
| 3 | ಜಗದೀಶ್ ಡಿ ಹೆಚ್ | ಅಭಿವೃದ್ಧಿ ಅಧಿಕಾರಿಗಳು(ಸಿಡಿಸಿ), ತಾಂ.ಶಿ.ಇ. ಬೆಂಗಳೂರು | ಸದಸ್ಯರು |
| 4 | ಎಸ್ ಡಿ ಗೊನ್‌ಸಾಲ್ವಿಸ್ | ಅಭಿವೃದ್ಧಿ ಅಧಿಕಾರಿಗಳು(ಸಿಡಿಸಿ), ತಾಂ.ಶಿ.ಇ. ಬೆಂಗಳೂರು | ಸದಸ್ಯರು |
| 5 | ಗಾಯತ್ರಿ ವಿ | ಆ.ಶ್ರೇ.ಉಪನ್ಯಾಸಕರು, ಸಿ ಎಸ್ ವಿಭಾಗ, ಇ-ಆಡಳಿತ ತಾಂ.ಶಿ.ನಿ, ಬೆಂ. | ಸದಸ್ಯರು |
| 6 | ಡಾ॥ ಚಂದ್ರಶೇಖರ್ | ಆ.ಶ್ರೇ.ಉಪನ್ಯಾಸಕರು ಸಿವಿಲ್ ವಿಭಾಗ, ಎಂಇಐ. ಪಾಲಿ., ಬೆಂಗಳೂರು | ಸದಸ್ಯರು |
| 7 | ಸಿ ವಿ ರವಿಶಂಕರ್ | ಆ.ಶ್ರೇ.ಉಪನ್ಯಾಸಕರು, ಯಾಂತ್ರಿಕ ವಿಭಾಗ, ಸ. ಪಾ. ಕೆಜಿಎಫ್ | ಸದಸ್ಯರು |
| 8 | ಜಗದೀಶ್ ಬಗಲಿ | ಆ.ಶ್ರೇ.ಉಪನ್ಯಾಸಕರು, ಆಟೋ. ವಿಭಾಗ, ಸ. ಪಾ. ಬಾಗೇಪಲ್ಲಿ | ಸದಸ್ಯರು |
| 9 | ಸಂಗೀತ | ಉಪನ್ಯಾಸಕರು, ಎಡಿಎಫ್‌ಟಿ ವಿಭಾಗ ಸ. ಮ. ಪಾ. ಬೆಂಗಳೂರು | ಸದಸ್ಯರು |

ಜಂಟಿ ನಿರ್ದೇಶಕರು(ಸಿಡಿಸಿ)

ಇವರಿಗೆ: 1. ಮೇಲ್ಕಂಡ ಅಧಿಕಾರಿಗಳು/ಸಮಿತಿಯ ಸದಸ್ಯರುಗಳು, ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.

2. ಇ-ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, 2ನೇ ಮಹಡಿ, ಬೆಂಗಳೂರು ಇವರಿಗೆ ಡಿಟಿಇ ವೆಬ್ ಸೈಟ್ ನಲ್ಲಿ ಪ್ರಕಟಿಸಲು ಮುಂದಿನ ಕ್ರಮಕ್ಕಾಗಿ.

ಪ್ರತಿ: ಸಂಬಂಧಪಟ್ಟ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ, ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.